

ಎಡದಿಂದ ಬಲಕ್ಕೆ:

1. ಬಾಗಿಲು ತೆಗೆದೊಡನೆ ಕಂಡದ್ದು ಅನಿರೀಕ್ಷಿತ ಅತಿಥಿ (4)
3. ಬಂಗಾರದ ಬರೀ ಬೆಲೆ ಕೇಳಿಯೇ ಹೆದರಿಕೆಯೇ? (3)
4. ಗದರಿದರೆ ಬಂದೀತೇ ಕತ್ತೆ? (3)
6. ತಾಳಲಾರದಂತೇನಿದೆ-ಗಿಡದ ಜೊತೆಗೊಂದು ಬಳ್ಳಿ, ಅಷ್ಟೆ (4)
8. ಮನೆಯನ್ನು ಭಾಗ ಮಾಡಲು ಯತ್ನಿಸಿ ಮರ್ಯಾದೆ ಹೋಯಿತು (4)
10. 'ನಿತ್ಯ ಬೆಳಗಿನ ಮೂಲ' ಸೂರ್ಯನೇ ತಾನೇ? (4)
12. ನಾಡಿನ ಸಂಸ್ಕೃತಿಯನ್ನೂ ಬಿಂಬಿಸುತ್ತದೆ-ಮಾತು, ವರ್ತನೆ (4)
16. ಹಣದುಬ್ಬರದಿಂದಾಗಿ ಎಲ್ಲ ತುಟ್ಟಿ (3)
17. ಕತೆ ಹೇಳಲಿಕ್ಕೆ ಹೋದಾಗ ಅದಾವ ಮಾಸ? (3)
18. ರುದ್ರೇಶನ ದೂರು ಕೆಟ್ಟ ಗುರಿ ಹೊಂದಿದೆ (4)

ಮೇಲಿಂದ ಕೆಳಕ್ಕೆ:

1. ಆಡಂಬರಕ್ಕೆ ಒಪ್ಪಬಾರದೆಂದು ಬಿನ್ನಹ (3)
2. ತೆಗೆದುಕೊಂಡದ್ದನ್ನೆಲ್ಲ ಹಿಂದಿರುಗಿಸಬೇಕೆಂಬ ಒತ್ತಾಯ ಬಂದಿದೆ (3)
3. ಒಗ್ಗುವುದಿಲ್ಲ ಬಿಡಿ, ಆತ ಹಳ್ಳಿಯವ (3)
5. ವೈಭವವನ್ನು ಪ್ರದರ್ಶಿಸಲೆಂದೇ ನಿರ್ಮಿಸಿರುವ ಭಾರೀ ಮನೆ (3)
6. ಬಂಧಿಸುವಂತೆ ಎಂತಹ ನಾಟಕ ಮಾಡಿ ನಿಯಂತ್ರಣಕ್ಕೆ ತಂದ! (4)
7. ತೋಳಿರದ ಬಟ್ಟೆ ಹೊಲಿಯಲು ಸಣ್ಣನೂಲು ಸಾಕು (4)
8. ಶಾಸನ ರೀತ್ಯಾ ನೀಡುವ ತಿಂಗಳೂಟದ ಹಣ (4)
9. ಬಂಡೆಯಲ್ಲೇ ಕೊರೆದ ಗುಡಿ ನೋಡಲು ಎಲ್ಲರ ಅವಸರ (4)
11. ಕಾರಿರುಳಿನಿಂದಾಗಿ ಎಲ್ಲವೂ ಕಪ್ಪು (3)
13. ಏನೂ ಕೊಡದವರ ಕೈಯಲ್ಲಿ ಮೃದ್ವಂಗಿ ಚಿಪ್ಪೂ ತಲೆಕೆಳಗು (3)
14. ಬೇರೆ ಏನಿದೆ? ಇಲ್ಲಂತೂ ಎಲ್ಲ ಖಾಲಿ (3)
15. ಯಾರ ಅಂಕುಶಕ್ಕೂ ಬದಲಾಗುವುದಿಲ್ಲ ಗಗನ (3)

## ಪದಬಂಧ 27-06-2013 ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಸ್ಥಿರ; 3. ನಿರಭ್ರ; 4. ಮೇದಿನಿ; 6. ಸಹಾಯಕ; 7. ಯಜಮಾನ; 9. ತರಾತುರಿ; 11. ಕರಿಬೇವು; 15. ಕಿತ್ತಾಟ; 16. ಪ್ರಾರಂಭ; 17. ಕಳಿಸಿ (=ಕಳುಹಿಸಿ).

ಮೇಲಿಂದ ಕೆಳಕ್ಕೆ:

1. ಅಭ್ರಕ; 2. ರಮೇಶ; 3. ನಿರ್ದಯ; 5. ನಿಸ್ತೇಜ; 6. ಸಮೇತ; 8. ನಲಿವು; 10. ತುಪಾಕಿ; 12. ರಿಷಭ; 13. ಕಂಟಕ; 14. ಚಪ್ರಾಸಿ.

# ಪ್ರಶ್ನಾಂಕಣ

## ಶನಿಯ ಉಂಗುರ - ಏನು ವಿಶೇಷ?

ವಿಶೇಷ ಏನೇ ಇರಲಿ, ಅದಕ್ಕೆ ಮೊದಲು ಒಂದು ಮುಖ್ಯ ವಿಷಯ: ಉಂಗುರಗಳನ್ನು ಧರಿಸಿರುವ ಗ್ರಹ ಶನಿಯೊಂದೇ ಏನಲ್ಲ. ನಮ್ಮ ಸೌರವ್ಯೂಹದ ನಾಲ್ಕೂ ದೈತ್ಯ ಗ್ರಹಗಳು (ಗುರು, ಶನಿ, ಯುರೇನಸ್ ಮತ್ತು ನೆಪ್ಚೂನ್) ಉಂಗುರಗಳನ್ನು ಪಡೆದಿವೆ. ಆದರೆ ಶನಿಗ್ರಹವನ್ನು ಪರಿವರಿಸಿರುವ ಉಂಗುರಗಳದೇ ಗರಿಷ್ಠ ಸಂಖ್ಯೆ, ಗರಿಷ್ಠ ಅಳತೆ, ಗರಿಷ್ಠ ಸಂಕೀರ್ಣತೆ ಮತ್ತು ಗರಿಷ್ಠ ಸೊಬಗು. ಹೀಗೆ 'ಗರಿಷ್ಠಗಳ ಗಣಿ' ಆಗಿರುವುದೇ ಶನಿಯ ಉಂಗುರವ್ಯೂಹದ ಪ್ರಥಮ ವೈಶಿಷ್ಟ್ಯ (ಚಿತ್ರ-1)

ಸೌರವ್ಯೂಹದ 'ಅನಿಲ ದೈತ್ಯ'ರ ಗುಂಪಿನಲ್ಲಿದ್ದು, ಗಾತ್ರದಲ್ಲಿ ಗುರುವಿನ ನಂತರದ ದ್ವಿತೀಯ ಸ್ಥಾನದಲ್ಲಿದ್ದು, ಹಾಗಿದ್ದೂ ನೀರಿಗಿಂತ ಕಡಿಮೆ ಸಾಂದ್ರತೆಯ ಶನಿಗ್ರಹದ ನೇರ ದರ್ಶನ (ದೂರದರ್ಶಕದ ಮೂಲಕ) ಅದೊಂದು ಅದ್ಭುತ ಅನುಭವ. ಶನಿಗ್ರಹ ಪ್ರದರ್ಶಿಸುವ ಪರಮ ಸುಂದರ ರೂಪಕ್ಕೆ ಅದರ ಉಂಗುರವ್ಯೂಹವೇ ಆಕರ. ಶನಿಯನ್ನು, ಅದರ ಉಂಗುರ ವ್ಯೂಹವನ್ನು ಸನಿಹದಿಂದ ವೀಕ್ಷಿಸಿ ಚಿತ್ರ-ಮಾಹಿತಿಗಳ ಮಹಾಪೂರವನ್ನೇ ಹರಿಸಿರುವ ಅತ್ಯಂತ ಇತ್ತೀಚಿನ 'ಕ್ಯಾಸಿನೀ ಮಿಶನ್' ವ್ಯೋಮನೌಕೆ (ಚಿತ್ರ-2) ಶನಿಯ ಉಂಗುರಗಳ ಎಲ್ಲ ವಿಶೇಷಗಳನ್ನೂ ನಿಚ್ಚಳಗೊಳಿಸಿದೆ.

ಶನಿಯ ಉಂಗುರದ ವೈಶಿಷ್ಟ್ಯಗಳು ಒಂದಲ್ಲ-ಎರಡಲ್ಲ: ಶನಿಯ ಉಂಗುರ ವ್ಯೂಹದಲ್ಲಿ ಸಮೀಪ ಒಂದು ಲಕ್ಷ ಸ್ವತಂತ್ರ ಬಳೆಗಳಿವೆ. ಶನಿಯ ಮೇಲ್ಮೈಯಿಂದ ಎರಡು ಲಕ್ಷ ಎಂಬತ್ತೆಂಟು ಸಾವಿರ ಕಿ.ಮೀ. ದೂರದವರೆಗೆ ಈ ಉಂಗುರಗಳು




ಹರಡಿವೆ. ಆದರೆ, ವಿಸ್ಮಯ ಏನೆಂದರೆ, ಈ ಬಳೆಗಳ ದಪ್ಪ ಇಪ್ಪತ್ತು ಮೀಟರ್ ಅನ್ನೂ ಮೀರಿಲ್ಲ! ಧೂಳಿನ ಕಣಗಳು, ನಾನಾ ಅನಿಲಗಳ ಘನೀಕೃತ ತುಣುಕುಗಳು, ಬಂಡೆ ಚೂರುಗಳು, ನೀರ್ಗಲ್ಲಿನ ತುಂಡುಗಳು ಇತ್ಯಾದಿ ವಸ್ತು ಸಾಮ್ರಾಜ್ಯದಿಂದ ಈ ಉಂಗುರ ವ್ಯೂಹ ರೂಪುಗೊಂಡಿದೆ. ಹಾಗಿದ್ದರೂ ಶನಿಗ್ರಹದ ಉಂಗುರ ವ್ಯೂಹದ ಸರ್ವದ್ರವ್ಯವನ್ನೂ ಒಟ್ಟುಗೂಡಿಸಿದರೆ ಒಂದೇ ಒಂದು ಕುಬ್ಜ ಚಂದ್ರನನ್ನಾಗಿಸುವಷ್ಟಾಗಬಹುದು ಅಷ್ಟೆ.

ಇನ್ನೊಂದು ಅದ್ಭುತ ವಿಶೇಷ ಏನೆಂದರೆ ಶನಿಗ್ರಹದ ಮತ್ತು ಅದರ ಹೇರಳ ಚಂದ್ರರ ಗುರುತ್ವ ಬಲಗಳ ಎಳೆತ-ಸೆಳೆತಗಳ ಪರಿಣಾಮವಾಗಿ ಈ ಉಂಗುರಗಳು ತೆಳ್ಳನೆಯ, ತೇಲುವ ಹೆದ್ದಾರಿಗಳಂತೆ ಶನಿಯನ್ನು ಸುತ್ತುತ್ತ ಚಿತ್ರ ವಿಚಿತ್ರವಾಗಿ ನೇಯ್ದುಕೊಳ್ಳುತ್ತ, ಹೆಣೆದುಕೊಳ್ಳುತ್ತ, ಗಂಟುಬೀಳುತ್ತ, ಗುಚ್ಛವಾಗುತ್ತ, ಮತ್ತೆ ಬಿಡಿಸಿಕೊಳ್ಳುತ್ತ... ಹಾಗೆಲ್ಲ ಅಚ್ಚರಿಯ ದೃಶ್ಯಗಳನ್ನು ನಿರಂತರ ಸೃಜಿಸುತ್ತಿವೆ.

ಶನಿಯ ಉಂಗುರುಗಳು ಹೀಗೆ ನಾನಾ ಬಗೆಗಳಲ್ಲಿ ಬಹಳ ವಿಶೇಷ; ವಿಸ್ಮಯಕರ ಕೂಡ.

■ ಎನ್. ವಾಸುದೇವ್